# ಪ್ರಥಮ ದರ್ಜೇ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಶಹಾಬಾದ

**CC No.755/2022**
**CW: 03 P W : 05**

**ಸಾಕ್ಷಿಯನ್ನು ಪ್ರಮಾಣೀಕರಿಸಿದ ದಿನಾಂಕ : 23.01.2026**

| | |
|---|---|
| ಹೆಸರು | : ಸಚಿನ್ ಗುಡದಗಿ |
| ತಂದೆಯ ಹೆಸರು | : ಸಂದಪ್ಪ |
| ವಯಸ್ಸು | : 30 |
| ಉದ್ಯೋಗ | : ಕೂಲಿ ಕೆಲಸ |
| ವಾಸಸ್ಥಳ | : ಅಫಜಲಪುರ |

**ಮುಖ್ಯ ವಿಚಾರಣೆ : ಸಹಾಯಕ ಸರ್ಕಾರಿ ಅಭಿಯೋಜಕರಿಂದ**

ಚಾಸಾ 1 ಮತ್ತು 2 ಇವರ ಪರಿಚಯ ನನಗೆ ಇರುವುದಿಲ್ಲ. ಈ ಹಂತದಲ್ಲಿ ಸಾಕ್ಷಿದಾರಿಗೆ ನಿಪಿ-1 ನ್ನು ತೋರಿಸಲಾಗಿ ಅದರ ಮೇಲೆರುವ ಸಹಿಯನ್ನು ಗುರತಿರುತ್ತಾರೆ ಅದನ್ನು ನಿಪಿ- 1(ಸಿ) ಎಂದು ಗುರತಿಲಾಯಿತು. ನಿಪಿ-1 ರ ಮೇಲೆ ಯಾವ ದಿನಾಂಕ ಹಾಗೂ ಸಮಯದಂದು ಸಹಿ ಹಾಕಿರುತ್ತೆನೇಂದು ನನಗೆ ಹೇಳಲು ಬರುವುದಿಲ್ಲ.

ನಿಪಿ-1 ರ ಮೇಲೆ ನಾನು ಯಾವ ಕಾರಣಕ್ಕೆ ಸಹಿ ಹಾಕಿರುತ್ತೆನೆ ಹೇಳಲು ಬರುವುದಿಲ್ಲ. ಈ ದಾಖಲೆಯ ಮೇಲೆ ಸಹಿನುನ ಅಬಕಾರಿ ಅಧಿಕಾರಿಗಳು ಹೇಳಿರುವುದಿಂದ ಮಾಡಿರುತ್ತೇನೆ. ಪೋಲೀಸರು ನನ್ನ ಹಾಗೂ ಚಾಸಾ-2 ಇವರ ಸಮಕ್ಷಮ ಪಂಚನಾಮೆಯನ್ನು ಜರುಗಿಸಿ ಯಾವುದೇ ವಸ್ತುಗಳನ್ನು ಜಪ್ತುಪಡಿಸಿಕೊಂಡಿರುವುದಿಲ್ಲ. ಪ್ರಕರಣದ ಕುರಿತು ನನಗೆ ಯಾವುದೇ ಮಾಹಿತಿ ಇರುವುದಿಲ್ಲ.

**(ಈ ಹಂತದಲ್ಲಿ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು)**

**ಪಾಟೀ ಸವಾಲು : ಸಹಾಯಕ ಸರ್ಕಾರಿ ಅಭಿಯೋಜಕರಿಂದ**

ದಿ: 11/11/2021 ರಂದು ನನ್ನ ಹಾಗೂ ಚಾಸಾ-3 ಇವರ ಸಮಕ್ಷಮ ಬೆಳಿಗನ 8 ರಿಂದ 9 ರವರೆಗೆ ನಿ.ಪಿ.1 ರಂತೆ ಸ್ಟೇಷನ್ ತಾಂಡಾದ ಮನೆಯೊಂದರಲ್ಲಿ ಪಂಚನಾಮೆಯನ್ನು ಜರುಗಿಸಿ ಮು.ಮಾ.1 ನ್ನು ಜಪ್ತು ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಾನು ನಿ.ಪಿ.1 ರ ಮೇಲೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಗುನ್ನಾ ಸ್ಥಳದ ಬಳಿ ಒಂದು ಮನೆಯಿದ್ದು ಸದರಿ ಮನೆಯಿಂದ ಕಳ್ಳಭಟ್ಟಿ ಸರಾಯಿಯನ್ನು ಜಪ್ತು ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಮನೆಯು ಆರೋಪಿತಳಿಗೆ ಸೇರಿರುತ್ತದೆ ಎಂದರೆ ಸರಿಯಲ್ಲ. ಪಂಚನಾಮೆ ವಿಷಯವನ್ನು ನನಗೆ ಪೋಲೀಸರು ಮೊದಲೇ ತಿಳಿ ಹೇಳಿರುತ್ತಾರೆ ಎಂದರೆ

ಸರಿಯಲ್ಲ.  ನಿ.ಪಿ.1 ರಲ್ಲಿ ಬರೆದಿರುವ ಸಂಗತಿಗಳ ಬಗ್ಗೆ ಮಾಹಿತಿ ಇದ್ದರೂ ಸಹ ಆರೋಪಿಗೆ ಸಹಾಯಗೊಳಿಸಲು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : ಆರೋಪಿ ಪರ ವಕೀಲರಿಂದ**

ಈ ಹಂತದಲ್ಲಿ ಆರೋಪಿ ಪರ ವಕೀಲರು ಪಾಟೀ ಸವಾಲು ಎನೂ ಇಲ್ಲ ಎಂದು ತಿಳಿಸಿರುತ್ತಾರೆ.

ಮರುವಿಚಾರಣೆ : **ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ.**

**Sd/-**
**ಪ್ರ.ದ.ನ್ಯಾ.ದಂ.ಗಳು, ಶಹಾಬಾದ**